

# ಜೀವನಕ್ಕೆ ಚೌಕಟ್ಟು

**ಕ್ಯಾ**ಮೆರಾ ಬದುಕಿನ ಅನಂತಕ್ಷಣಗಳಲ್ಲಿ ಒಂದಕ್ಕೆ ಚೌಕಟ್ಟುಹಾಕಿ ನಮ್ಮ ಮುಂದಿಡುತ್ತದೆ. ಅದು ನಮ್ಮನ್ನು ಖುಷಿಗೊಳಿಸಬಹುದು, ಆತಂಕಕ್ಕೀಡು ಮಾಡಬಹುದು, ಮಧುರ ಭಾವನೆಗಳನ್ನು ಉದ್ದೀಪಿಸಬಹುದು. ಸಕಲ ಭಾವಗಳಿಗೂ ಅದರಲ್ಲಿ ಎಡೆಯುಂಟು. ಕಪ್ಪುಬಿಳುಪಿನ ಚಿತ್ರಗಳು ಈಗಲೂ ನೆನಪುಗಳನ್ನು ಕೆದಕುವುದು, ಮರೆತ ಕತೆಗಳನ್ನು ಮೌನವಾಗಿಯೇ ಹೇಳುವುದು ನಮ್ಮ ಅನುಭವಕ್ಕೆ ಬಂದಿರುತ್ತದೆ. ಸಾಹಿತ್ಯ ಕೂಡ ಬದುಕಿನ ಅಸಂಖ್ಯ ಕ್ಷಣಗಳು ಒಂದು ವಿಸ್ತಾರವಾದ ಚೌಕಟ್ಟಿನಲ್ಲಿರುವ ಸುಸಂಬದ್ಧ ಸಂಯೋಜನೆಯಾಗಿದೆ. ಸಾಹಿತ್ಯ, ಛಾಯಾಗ್ರಹಣ ಮಾತ್ರವಲ್ಲ ಅನೇಕ ಕಲೆಗಳು ಬದುಕಿಗೆ ಒಂದು ಚೌಕಟ್ಟು ಹಾಕಿ ರಸಿಕರ ಮುಂದಿಡುವ ಕೆಲಸದಲ್ಲಿ ನಿರಂತರವಾಗಿ ತೊಡಗಿರುತ್ತವೆ. ನಮ್ಮ ದೈನಿಕದ ಬದುಕಿನಲ್ಲಿ ನಾವು ನೋಡುವ ನೋಟಗಳಿಗೂ ಒಂದು ದೃಶ್ಯದ ಚೌಕಟ್ಟು ಇದ್ದೇ ಇರುತ್ತದೆ. ಇಂತಹ ಬದುಕಿನಿಂದಲೇ ನೇರವಾಗಿ ಮೂಡಿದ ಅನನ್ಯ ಚಿತ್ರಸಮೂಹಗಳನ್ನು ಈ ಸಂಚಿಕೆ ಒಳಗೊಂಡಿದೆ.

'ರಾಜಕೀಯವಿಲ್ಲದೆ ಸಾಹಿತ್ಯವಿಲ್ಲ, ಬದುಕಿಲ್ಲ' ಎಂದು ಕತೆಗಾರ ವಿವೇಕ ಶಾನಭಾಗ ಈ ಬಾರಿಯ 'ಮಾತು–ಕತೆ'ಯಲ್ಲಿ ಹೇಳಿದ್ದಾರೆ. ನಮ್ಮ ಬದುಕಿನ ಎಲ್ಲ ವಲಯಗಳನ್ನು ಪ್ರಭಾವಿಸುವ, ಅದರ ದಿಕ್ಕನ್ನೇ ಬದಲಿಸುವ ರಾಜಕೀಯದ ಶಕ್ತಿ ಅಗಾಧ ಮತ್ತು ಅಷ್ಟೇ ಅರ್ಥಪೂರ್ಣವಾದದ್ದು. ಅವರು ಈ ಸಂದರ್ಶನದಲ್ಲಿ ಕಲೆ, ಸಾಹಿತ್ಯ, ಕತೆ, ವಿಮರ್ಶೆ, ಅನುವಾದ, ಜಾಗತೀಕರಣ ಹೀಗೆ ಹಲವು ವಿಷಯಗಳ ಕುರಿತು ಮಾತನಾಡಿದ್ದಾರೆ. ಈ ಸಂದರ್ಶನದಲ್ಲಿ ಈ ಕಾಲದ ಬರಹಗಾರನೊಬ್ಬನ ಸೂಕ್ಷ್ಮ ಚಿಂತನೆ, ವಿಚಾರಗಳ ಮಂಡನೆ ಇದೆ. ಇದು ಈ ಸಂಚಿಕೆಯ ವಿಶೇಷ.

ತಮ್ಮ ಅರ್ಥಪೂರ್ಣ ಬದುಕಿಗೆ ವಿದಾಯ ಹೇಳಿದ ಕನ್ನಡದ ಇಬ್ಬರು ಪ್ರತಿಭಾವಂತರ ಬಗ್ಗೆ ಈ ಸಂಚಿಕೆಯಲ್ಲಿ ಲೇಖನಗಳಿವೆ. ಒಬ್ಬರು ವಿಶಿಷ್ಟ ಗೆರೆಗಳಿಂದ ತಮ್ಮದೇ ಛಾಪು ಮೂಡಿಸಿದ ರಾವ್‌ಬೈಲ್, ಇನ್ನೊಬ್ಬರು ಲೇಖಕ ಪ್ರಭುಶಂಕರ. ಅವರ ಕುರಿತ ನುಡಿನೋಟಗಳು ಅವರನ್ನು ಓದುಗರಿಗೆ ಇನ್ನಷ್ಟು ಆಪ್ತವಾಗಿಸುವಂತಿವೆ. ಅಗಲಿದ ಈ ಹಿರಿಯರಿಗೆ 'ಮಯೂರ'ದ ನಮನಗಳು.

**ಸಂದೀಪ ನಾಯಕ**